

## ವಿಡಿಯೊ ವೈಭವ

ಮದುವೆ ನಿಶ್ಚಯವಾದೊಡನೆ ಹೊಸ ಕಾಲದ ಜೋಡಿಗೆ ಇರುವ ಫ್ಯಾಂಟಸಿ ಫೋಟೊಶೂಟ್. ಕರ್ನಾಟಕದ ಹಲವು ಜಾಗಗಳು ಈಗ ಪ್ರೀವೆಡಿಂಗ್ ಶೂಟ್ ತಾಣಗಳಾಗಿ ಗುರುತಾಗಿವೆ. ಸಣ್ಣ ಪುಟ್ಟ ಪಟ್ಟಣಗಳಲ್ಲೂ ಮದುವೆ ಫೋಟೊಗ್ರಾಫರ್‌ಗಳಿಗೆ ಪ್ರೀವೆಡಿಂಗ್ ಫೋಟೊಶೂಟ್ ದೊಡ್ಡ ವರಮಾನ ತರುವ ದಾರಿಯಾಗಿದೆ. ಮದುವೆಗೆ ಮೊದಲು ಚಿತ್ರೀಕರಿಸಿದ ಫೋಟೊ, ವಿಡಿಯೊಗಳನ್ನು ಮದುವೆಯ ದಿನ ಕಲ್ಯಾಣ ಮಂಟಪದಲ್ಲಿ ಇರಿಸಿದ ದೊಡ್ಡ ಪರದೆಗಳ ಮೇಲೆ ತೋರಿಸುವುದು ಟ್ರೆಂಡ್ ಕೂಡ ಆಗಿದೆ. ಪ್ರೀ–ವೆಡಿಂಗ್ ಶೂಟ್ ಆದ ನಂತರ ಮದುವೆ ಒಂದು ವೇಳೆ ಮುರಿದುಬಿದ್ದರೆ, ಆಮೇಲೆ ಎಲ್ಲ ಹಾರ್ಡ್‌ಡಿಸ್ಕ್‌ಗಳು, ಲ್ಯಾಪ್‌ಟಾಪ್‌ಗಳು ಹಾಗೂ ಕಂಪ್ಯೂಟರ್‌ಗಳಿಂದ ಆ ನೆನಪುಗಳನ್ನು ಅಳಿಸಿಹಾಕುವುದು ಸವಾಲೇ ಆಗಿರುವ ಕಾಲವಿದು.

ಬೆಂಗಳೂರಿನಲ್ಲಿ ಇಂತಹ ಸೇವೆ ಒದಗಿಸುವ ಕಂಪನಿಗಳಲ್ಲಿ ಪ್ರತಿಷ್ಠಿತ ಎನಿಸಿಕೊಂಡಿದೆ ಸ್ಟೋರೀಸ್ ಬೈ ಆರ್‌ಜೆ. ಈ ಕಂಪನಿಯವರು ಪ್ರೇಮಿಗಳ ಫೋಟೊಶೂಟ್ ಮಾಡಿಕೊಡುತ್ತಾರೆ, ಮದುವೆ, ಮದುವೆಪೂರ್ವದ ಫೋಟೊಶೂಟ್ ಅನ್ನು ದೇಸಿ ನೆಲದಲ್ಲಿ ಅಷ್ಟೇ ಅಲ್ಲದೆ ವಿದೇಶಗಳಲ್ಲಿಯೂ ಮಾಡಿಕೊಡುವಂತಹ ವ್ಯಾಪಕ ಜಾಲವನ್ನು ಹೊಂದಿದ್ದಾರೆ. ಎಲ್ಲಕ್ಕು ತಕ್ಕಂತೆ ದೊಡ್ಡ ಬಜೆಟ್ ಇಟ್ಟುಕೊಂಡಿರಬೇಕು. ‘ಸಿನಿಮ್ಯಾಟಿಕ್ ಇಂಟರ್‌ನ್ಯಾಷನಲ್ ಶೂಟ್’ ಎನ್ನುವ ಪ್ರತ್ಯೇಕ ಸೇವೆ ಈ ಕಂಪನಿಯ ಮೆನುವಿನಲ್ಲಿ ಇದೆ. ಹನಿಮೂನ್ ಹೋದಾಗಲೂ, ಪ್ರವಾಸದ ಮಧುರ ಕ್ಷಣಗಳನ್ನು ಜೋಡಿಯ ಖಾಸಗೀತನಕ್ಕೆ ಧಕ್ಕೆ ಬರದಂತೆ ಜತನವಾಗಿ ಹಿಡಿದುಕೊಡಬಲ್ಲ ಛಾಯಾಚಿತ್ರಗಳನ್ನೂ ಈ ಕಂಪನಿಯವರು ತೆಗೆದುಕೊಡುತ್ತಾರೆ. ಬೆಂಗಳೂರಿನ ಎಷ್ಟೋ ಪ್ರತಿಷ್ಠಿತ ಮದುವೆಗಳಲ್ಲಿ ಈ ಸ್ಟುಡಿಯೊದ ಛಾಪನ್ನು ಈಗ ನಾವು ನೋಡಬಹುದು.

ಮಾರುಕಟ್ಟೆಯಲ್ಲಿ ಟ್ರೆಂಡ್ ಆದವು. ಅಲ್ಲಿಂದ ನಂತರದ ಕೆಲವು ವರ್ಷಗಳು ಮಾರುಕಟ್ಟೆಯಲ್ಲಿ ಸಲ್ಮಾನ್–ಮಾಧುರಿ ಶೈಲಿಯ ಮದುವೆ ಉಡುಗೆಗಳಿಗೆ ಇನ್ನಿಲ್ಲದ ಬೇಡಿಕೆ. ಅದೇ ವಿಸ್ತರಿಸಿಕೊಳ್ಳುತ್ತಾ ದೇಶದ ಸಣ್ಣ ಪಟ್ಟಣಗಳಿಗೂ ವ್ಯಾಪಿಸಿದ್ದುಸುಳ್ಳಲ್ಲ. ಬಟ್ಟೆಯ ಗುಣಮಟ್ಟ ಯಾವುದೇ ಇರಲಿ, ವಿನ್ಯಾಸ ಆ ಸಿನಿಮಾದ ರೀತಿಯದ್ದೇ ಆಗಿರಬೇಕು ಎಂದು ಬಯಸಿದವರು ಆಗ ಅಡಿಗಡಿಗೂ ಸಿಗುತ್ತಿದ್ದರು.

ಅದಕ್ಕೂ ಹತ್ತು ವರ್ಷಗಳ ಹಿಂದೆ, 1984ರಲ್ಲಿ ‘ಮದುವೆ ಮಾಡು ತಮಾಷೆ ನೋಡು’ ಎನ್ನುವ ಕನ್ನಡ ಸಿನಿಮಾ ಬಂದಿತ್ತು. ದ್ವಾರಕೀಶ್ ನಿರ್ಮಿಸಿ, ಸತ್ಯ ಅವರು ನಿರ್ದೇಶಿಸಿದ್ದ ಆ ಸಿನಿಮಾದಲ್ಲಿ ವಿಷ್ಣುವರ್ಧನ್, ಆರತಿ ಅಭಿನಯಿಸಿದ್ದರು. ‘ಡೌರಿ ಕಲ್ಯಾಣಂ’ ಎಂಬ ತಮಿಳು ಚಿತ್ರದ ರೀಮೇಕ್ ಅದು. ವರದಕ್ಷಿಣೆಯ ಅಷ್ಟೂ ಮೊತ್ತವನ್ನು ಹೊಂಚಲಾಗದೆಯೂ ಕಷ್ಟಪಟ್ಟು ತಂಗಿಯ ಮದುವೆ ಮಾಡುವ ಕಥಾನಾಯಕನನ್ನು ಒಳಗೊಂಡ ಸಿನಿಮಾ ಅದು. ಲವಲವಿಕೆಯ ಕಥಾಹಂದರ ಇರುವ ಆ ಸಿನಿಮಾದ ಬಹುಪಾಲು ಮದುವೆ ಮನೆಯಲ್ಲಿ ನಡೆಯುವ ವಿದ್ಯಮಾನಗಳೇ ತುಂಬಿಕೊಂಡಿವೆ. ಸಮಾಜವು ವಿವಾಹ ಸಮಾರಂಭಗಳ ವಿಷಯದಲ್ಲಿ ಎದುರಿಸುತ್ತಿರುವ ಬಿಕ್ಕಟ್ಟುಗಳನ್ನು ನವಿರು ಹಾಸ್ಯ ಬೆರೆಸಿ ಆ ಚಿತ್ರ ದಾಟಿಸಿತ್ತು.



ಆ ಸಿನಿಮಾ ನೋಡಿ ಹೊರಬಂದ ಜನರು ಮದುವೆ ಮಾಡುವ ಕಷ್ಟಗಳನ್ನು ಮೆಲುಕು ಹಾಕುತ್ತಾ ಅಥವಾ ಆ ಪಾತ್ರಗಳ ಜಾಗದಲ್ಲಿ ತಮ್ಮನ್ನು ಕಲ್ಪಿಸಿಕೊಳ್ಳುತ್ತಾ ಹನಿಗಣ್ಣಾಗಿದ್ದರು. ಹತ್ತೇ ವರ್ಷಗಳ ಅಂತರದಲ್ಲಿ ಬಂದ ಈ ಎರಡೂ ಸಿನಿಮಾಗಳು ನಮ್ಮ ಸಮಾಜ ಮದುವೆ ಸಮಾರಂಭವನ್ನು ನೋಡುತ್ತಿರುವ ಎರಡು ಬಗೆಗಳನ್ನು ನಮ್ಮೆದುರು ತೆರೆದಿಡುತ್ತವೆ. 2013ರಲ್ಲಿ ತೆರೆಕಂಡ ‘ಜಾಲಿ ಎಲ್‌ಎಲ್‌ಬಿ’ ಹಿಂದಿ ಸಿನಿಮಾದಲ್ಲಿ ಸೌರಭ್ ಶುಕ್ಲಾ ಅವರು ನ್ಯಾಯಮೂರ್ತಿಯ ಪಾತ್ರದಲ್ಲಿ ಅಭಿನಯಿಸಿದ್ದರು. ಪ್ರಮುಖವಾದ ಪ್ರಕರಣದ ವಿಚಾರಣೆ ನಡೆಯುತ್ತಿರುವ ಸಂದರ್ಭದಲ್ಲಿಯೂ ಅವರು– ಮಗಳ ಮದುವೆ ದಿನ ಹತ್ತಿರಾಗುತ್ತಿದ್ದು, ಅದಕ್ಕಾಗಿ

